JUNE 24, 2025

**AKASHAVANI - DHARWAD**

**PRADESH SAMACHARA (KANNADA) 12 PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**1. ರಾಜ್ಯದ ಸರ್ಕಾರಿ ಶಾಲೆಗಳ, 1 ರಿಂದ 10ನೇ ತರಗತಿಯ, 40 ಲಕ್ಷ 68 ಸಾವಿರ ಮಕ್ಕಳಿಗೆ ತಲಾ 1 ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳ ಖರೀದಿಗೆ, 111 ಕೋಟಿ 88 ಲಕ್ಷ ಅನುದಾನ ಬಿಡುಗಡೆಗೆ ರಾಜ್ಯ ಸರ್ಕಾರ, ಶಿಕ್ಷಣ ಇಲಾಖೆಗೆ ಒಪ್ಪಿಗೆ ನೀಡಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ, ವಿದ್ಯಾ ವಿಕಾಸ ಯೋಜನೆ ಅಡಿ, ಒಟ್ಟು 410 ಕೋಟಿ ರೂಪಾಯಿ ನಿಗದಿ ಪಡಿಸಲಾಗಿದೆ. ಆ ಪೈಕಿ ಮೊದಲ ಕಂತಾಗಿ, 111 ಕೋಟಿ 88 ಲಕ್ಷ ರೂಪಾಯಿ ಅನುದಾನವನ್ನು, ಸ್ಯಾಟ್ಸ್ ತಂತ್ರಾಂಶ ಆಧರಿಸಿ, ವಿದ್ಯಾರ್ಥಿಗಳ ದಾಖಲಾತಿಗೆ ಅನುಗುಣವಾಗಿ, ಅನುದಾನ ಒದಗಿಸಲು, ಶಿಕ್ಷಣ ಆಯುಕ್ತರಿಗೆ ಆದೇಶಿಸಲಾಗಿದೆ.**

<><><>

**2. ಪ್ರಧಾನಮಂತ್ರಿ ಜನಸುರಕ್ಷಾ ವಿಮೆ ಯೋಜನೆ ಅಡಿ, ಮುಂಬರುವ ಶೈಕ್ಷಣಿಕ ವರ್ಷದಿಂದ, ಬೆಂಗಳೂರು ವಿಶ್ವವಿದ್ಯಾಲಯ, ತನ್ನ ಎಲ್ಲ ಸ್ನಾತಕ, ಸ್ನಾತಕೋತ್ತರ ಹಾಗೂ ಪಿ.ಎಚ್.ಡಿ. ವ್ಯಾಸಂಗ ನಿರತ ವಿದ್ಯಾರ್ಥಿಗಳಿಗೆ, ಆರೋಗ್ಯ ವಿಮೆ ಮಾಡಿಸಲು, ನಿರ್ಧರಿಸಿದೆ. 2022 ರಲ್ಲಿ, ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಶಿಲ್ಪಾ, ಬಿ.ಎಂ.ಟಿ.ಸಿ. ಬಸ್ ಅಪಘಾತದಲ್ಲಿ ಮೃತಪಟ್ಟ ಹಿನ್ನೆಲೆ, ಅನಿರೀಕ್ಷಿತವಾಗಿ ವಿದ್ಯಾರ್ಥಿಗಳಿಗೆ ಎದುರಾಗಬಹುದಾದ ವೈದ್ಯಕೀಯ ವೆಚ್ಚಗಳ ಭಾರವನ್ನು, ಪೋಷಕರಿಗೆ ವರ್ಗಾಯಿಸದಿರಲು, ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆ ನಿರ್ಧರಿಸಿದೆ.**

<><><>

**3. ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ವ್ಯಾಪ್ತಿಯ, ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ – ಅಪೇಡಾ, ಯುರೋಪ್ ರಾಷ್ಟ್ರಗಳಿಗೆ ರಾಜ್ಯದ ನೇರಳೆ ಹಣ್ಣನ್ನು, ಪ್ರಥಮ ಬಾರಿಗೆ ರಫ್ತು ಮಾಡಲು ಯೋಜಿಸಿದೆ. ನೆಲಮಂಗಲ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಂತರ ಜಿಲ್ಲೆಯಲ್ಲಿ ಬೆಳೆಯಲಾಗುವ, ಕುಂದನ್ ತಳಿಯ, ಎರಡೂವರೆ ಕ್ವಿಂಟಾಲ್ ನೇರಳೆ ಹಣ್ಣನ್ನು, ಇಂಗ್ಲೆಂಡಿಗೆ ರಫ್ತು ಮಾಡುವ ಪ್ರಕ್ರಿಯೆಗೆ, ಚಾಲನೆ ನೀಡಲಾಗಿದೆ ಎಂದು, ಅಪೇಡಾ ಅಧ್ಯಕ್ಷ ಅಭಿಷೇಕ್ ದೇವ್ ತಿಳಿಸಿದ್ದಾರೆ.**

<><><>

**4. ಪ್ರಜಾಪ್ರಭುತ್ವ ಸ್ಫೂರ್ತಿ ಬಿಂಬಿಸುವ, ದೀಪಶಿಖಾ ಯಾತ್ರೆಗೆ, ನಾಳೆ ಹೊಸ ದಿಲ್ಲಿಯಲ್ಲಿ ಚಾಲನೆ ನೀಡಲಾಗುತ್ತಿದೆ. ಒಂದು ವರ್ಷ ದೇಶಾದ್ಯಂತ ಈ ಯಾತ್ರೆ ಸಂಚರಿಸಲಿದೆ. 2026ರ ಮಾರ್ಚ್ 21 ರಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ, ಕೊನೆಗೊಳ್ಳಲಿದೆ.**

<><><>

**ತುರ್ತು ಪರಿಸ್ಥಿತಿ ಹೇರಿಕೆಯಾಗಿ, ನಾಳೆಗೆ 50 ವರ್ಷ ತುಂಬುತ್ತಿರುವ ಹಿನ್ನೆಲೆ, ದೇಶವ್ಯಾಪಿ 'ಸಂವಿಧಾನ ಹತ್ಯಾ ದಿನ' ಆಚರಿಸಲು, ಬಿಜೆಪಿ ಸಿದ್ಧವಾಗಿದೆ.**

<><><>

ವಿಪಕ್ಷ ನಾಯಕರ ಸಾಮೂಹಿಕ ಸೆರೆ, ನಾಗರಿಕ ಹಕ್ಕುಗಳ ನಿರ್ಬಂಧ ಹಾಗೂ ಮಾಧ್ಯಮಗಳ ಮೇಲೆ ವಿಧಿಸಲಾದ, ಕಡಿವಾಣಗಳ ಕುರಿತು, ಪ್ರಚಾರ ವಿಷಯಗಳನ್ನು ಸಿದ್ಧ ಪಡಿಸಲಾಗಿದೆ.

<><><>

ತುರ್ತು ಪರಿಸ್ಥಿತಿಯ ಕರಾಳ ಅಧ್ಯಾಯ ನೆನಪಿಸಲು, 'ಸಂವಿಧಾನ ಹತ್ಯೆ ದಿನ' ಶೀರ್ಷಿಕೆಯ ಕಿರುಚಿತ್ರವನ್ನು, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ, ತನ್ನ ಜಾಲತಾಣದಲ್ಲಿ ಪ್ರದರ್ಶಿಸಲಿದೆ.

<><><>

5. ತುರ್ತು ಪರಿಸ್ಥಿತಿಯಿಂದ ಆರಂಭವಾದ, ಕಾಂಗ್ರೆಸ್ಸಿನ ಸರ್ವಾಧಿಕಾರಿ ಧೋರಣೆ, ಇಂದಿಗೂ ಮುಂದುವರೆದಿದೆ ಎಂದು, ಸಂಸದ ಜಗದೀಶ ಶೆಟ್ಟರ ಟೀಕಿಸಿದ್ದಾರೆ. ಬೆಳಗಾವಿಯ, ಮಹಾವೀರ ಭವನದಲ್ಲಿ ಆಯೋಜಿಸಿದ್ದ, ತುರ್ತು ಪರಿಸ್ಥಿಗೆ 50 ವರ್ಷ ವಿಶೇ ’ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು.

<><><>

ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮಾತನಾಡಿ, ತುರ್ತು ಪರಿಸ್ಥಿತಿ ವಿರೋಧಿಸಿ ನಡೆದ ಹೋರಾಟ, ಭಾರತದ ಎರಡನೇ ಸ್ವಾತಂತ್ರ್ಯ ಹೋರಾಟ ಎಂದರು. ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಸೇರಿದಂತೆ, ಗಣ್ಯರು, ಬಿಜೆಪಿ ಮುಖಂಡರು ಪಾಲ್ಗೊಂಡಿದ್ದರು

<><><>

ಬೆಳಗಾವಿಯ ಹಿರಿಯ ಪತ್ರಕರ್ತ, ಸುಭಾಷ ಕುಲಕರ್ಣಿ, ಪ್ರದೇಶ ಸಮಾಚಾರಕ್ಕಾಗಿ, ತುರ್ತು ಪರಿಸ್ಥಿತಿ ಸಂದರ್ಭದ ತಮ್ಮ ಅನುಭವಗಳನ್ನು, ಹಂಚಿಕೊಂಡಿದ್ದಾರೆ.

<><><>

ಸುಭಾಷ ಕುಲಕರ್ಣಿ ಧ್ವನಿ 30 ಸೆಕೆಂದುಗಳು

<><><>

6. ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟಗಾರ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಮಹಾದೇವಪ್ಪ ಕಡೇಚೂರ, ಕಲಬುರಗಿಯ ತಮ್ಮ ಸ್ವ ಗೃಹ ಜಗತ್‌ನಲ್ಲಿ ಇಂದು ಬೆಳಗಿನ ಜಾವ ನಿಧನರಾದರು. ಅವರಿಗೆ 95 ವ ’ೀ ವಯಸ್ಸಾಗಿತ್ತು. ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಸಂಜೆ 5 ಗಂಟೆಗೆ, ಕಲಬುರಗಿಯ ವೀರೇಶ ನಗರದ, ತೋಟದಲ್ಲಿ ನೆರವೇರಲಿದೆ ಎಂದು, ಕುಟುಂಬ ತಿಳಿಸಿದೆ. ಮಹಾದೇವಪ್ಪ ಕಡೇಚೂರ ಅವರು, ಮೂಲತಃ ಯಾದಗಿರಿ ಜಿಲ್ಲೆ, ಸುರಪುರ ತಾಲೂಕಿನ ರಂಗಂಪೇಟೆಯವರು. 'ಶಿಕ್ಷಕ, ಪತ್ರಕರ್ತ, ಉದ್ಯಮಿ ಹಾಗೂ ಸಮಾಜ ಸೇವಕರಾಗಿ, ಜನಾನುರಾಗಿಯಾಗಿದ್ದರು' ಎಂದು, ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

7. ಬೀದರ್ ಜಿಲ್ಲೆ, ಬಸವಕಲ್ಯಾಣದ, ವಿಶ್ವ ಬಸವ ಧರ್ಮ ವಿಶ್ವಸ್ಥ ಮಂಡಳಿ ಕೊಡಮಾಡುವ, ಅನುಭವ ಮಂಟಪದ, ಜಯದೇವಿತಾಯಿ ಲಿಗಾಡೆ ಪ್ರಶಸ್ತಿಗೆ, ಬೀದರ್‌ನ ಪ್ರವಚನಕಾರ್ತಿ, ಸುವರ್ಣಾ ಚಿಮಕೋಡೆ ಆಯ್ಕೆಯಾಗಿದ್ದಾರೆ ಎಂದು, ಶ್ರೀ ಬಸವಲಿಂಗ ಪಟ್ಟದ್ದೇವರು ತಿಳಿಸಿದ್ದಾರೆ. ಪ್ರಶಸ್ತಿ 25 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

<><><>

8. ಹುಬ್ಬಳ್ಳಿಯ, ಜನಪದರು ಕರ್ನಾಟಕ ಜಾನಪದ ಜಗತ್ತು ಟ್ರಸ್ಟ್ ವತಿಯಿಂದ, ಮಾತೋಶ್ರೀ ಅಂದಮ್ಮ ಸಿದ್ದನಗೌಡ ಜಕ್ಕನಗೌಡ್ರ ಸ್ಮರಣಾರ್ಥ ದತ್ತಿ ಪ್ರಶಸ್ತಿಯನ್ನು, ಕಲಾವಿದ ಗದಿಗೆಯ್ಯ ಹಿರೇಮಠ ಅವರಿಗೆ, ಆರ್.ಟಿ. ತವನಪ್ಪನವರ ಹಾಗೂ ಮೋಹನ ಲಿಂಬಿಕಾಯಿ, ಪ್ರಶಸ್ತಿ ನೀಡಿ, ಗೌರವಿಸಿದರು. ಟ್ರಸ್ಟಿನ ಅಧ್ಯಕ್ಷ ರಾಮೂ ಮೂಲಗಿ ಮಾತನಾಡಿ, ಪ್ರತಿಭಾವಂತ ಕಲಾವಿದ ಜೀ.ವಿ. ಅವರಿಗೆ ಪ್ರಥಮ ದತ್ತಿ ಪ್ರಶಸ್ತಿ ನೀಡಿ, ಗೌರವಿಸುತ್ತಿರುವುದು, ಸಂತಸ ತಂದಿದೆ ಎಂದರು.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>